

# ಹಳೆ ಸೀರೆಯಲಿ ಹೊಸ ಲೆಹೆಂಗಾ

**ಇಸ್ತ್ರಿ ಮಾಡುವಾಗ ಅಚಾನಕ್ ಆಗಿ ಸುಟ್ಟುಹೋದ, ಉಟ್ಟು ಉಟ್ಟು ಬೇಜಾರಾದ ರೇಷ್ಮೆ ಸೀರೆಗಳಿದ್ದರೆ ಅವುಗಳನ್ನು ಎಸೆಯಬೇಕಿಲ್ಲ. ಸುಂದರ, ಟ್ರೆಂಡಿಯಾದ ಲೆಹೆಂಗಾ, ಸ್ಕರ್ಟ್, ಕುರ್ತಿ, ಫುಲ್‌ಮ್ಯಾಕ್ಸಿಗಳಂತಹ ಉಡುಪಾಗಿ ಮಾರ್ಪಾಡು ಮಾಡಿ ಹೊಸ ಮೆರುಗು ಪಡೆಯಬಹುದು.**

**ಯು. ಅನಂತ್**

ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುವ ಸುನಂದಾಗೆ ಬೆಳಿಗ್ಗೆ ಕಚೇರಿಗೆ ರೆಡಿಯಾಗುವುದೆಂದರೆ ಎಲ್ಲಿಲ್ಲದ ಆತುರ. ಎಲ್ಲರೂ ಅಂದು ಕಡುಗೆಂಪು ಬಣ್ಣದ ರೇಷ್ಮೆ ಸೀರೆ ಉಡುವುದೆಂದು ನಿರ್ಧರಿಸಿದ ಕಾರಣ ಸುನಂದಾ, ಅಮ್ಮ ತನಗಾಗಿ ಕೊಟ್ಟ ರೇಷ್ಮೆಸೀರೆಯನ್ನು ಉಡುವುದೆಂದು ಆಯ್ಕೆ ಮಾಡಿಕೊಂಡಳು. ಬೆಳಿಗ್ಗೆ ತರಾತುರಿಯಲ್ಲಿ ಇಸ್ತ್ರಿ ಹಾಕಲು ಹೋದಾಗ ಸೀರೆ ಸುಟ್ಟು ಹೋಗಬೇಕೆ? ಬೇಸರದಿಂದಲೇ ಸುನಂದಾ ಬೇರೆ ಸೀರೆಯುಟ್ಟು ಆಫೀಸಿಗೆ ಹೋಗಬೇಕಾಯಿತು.

ಅಮ್ಮನ ಉಡುಗೊರೆ ಸುಟ್ಟು ಹೋಯಿತಲ್ಲಾ ಎಂದು ಕೊರಗುತ್ತಾ ತನ್ನ ಗೆಳತಿಯ ಬಳಿ ದುಃಖ ತೋಡಿಕೊಂಡ ಸುನಂದಾಗೆ ಗೆಳತಿ ಒಂದು ಉತ್ತಮ ಸಲಹೆ ನೀಡಿದಳು.

‘ಈ ಸೀರೆಯನ್ನು ಇಂದಿನ ಟ್ರೆಂಡ್‌ಗೆ ತಕ್ಕಂತೆ ಕುರ್ತಿ ಹೊಲಿಸಿಕೊ. ಆಗಾಗ ಕಚೇರಿಗೂ ಹಾಕಬಹುದು, ಅಮ್ಮನ ನೆನಪು ಹಾಗೇ ಉಳಿಯುತ್ತದೆ’. ಗೆಳತಿಯ ಸಲಹೆ ಸಮಂಜಸ ಎನಿಸಿ ಸುನಂದಾ ಇಂದಿನ ಫ್ಯಾಷನ್ ಟ್ರೆಂಡ್‌ಗೆ ತಕ್ಕಂತೆ ಕುರ್ತಿ ಹೊಲಿಸಿಕೊಂಡಳು, ಉಳಿದ ಬಟ್ಟೆಯಿಂದ ತನ್ನ ಮಗಳಿಗೂ ಒಂದು ಫ್ರಾಕ್ ಹೊಲಿಸಿದಳು.

‘ಅಮ್ಮ ಕೊಟ್ಟ ಸೀರೆ, ಅಪ್ಪ ಕೊಡಿಸಿದ ಒಡವೆ’ ಎಂದರೆ ಅದರೊಂದಿಗೆ ಒಂದು ರೀತಿಯ ಭಾವನಾತ್ಮಕ ಸಂಬಂಧವೂ ಬೆರೆತಿರುತ್ತದೆ. ಯಾವುದೋ ಕಾರಣಕ್ಕೆ ಅಮ್ಮನದೇ ಸೀರೆಯೋ ಅಥವಾ ಅಮ್ಮ ನೀಡಿದ ಸೀರೆಯೋ ಸುಟ್ಟುಹೋದರೆ, ಹರಿದುಹೋದರೆ ಚಿಂತೆ ಪಡಬೇಕಾಗಿಲ್ಲ. ಈಗ ಹಳೆ ಸೀರೆ; ಹೊಸ ಉಡುಗೆಯೇ ಫ್ಯಾಷನ್ ಟ್ರೆಂಡ್.

ಹೆಣ್ಣು ಮಕ್ಕಳಿಗೆ ಒಡವೆ, ಸೀರೆಗಳ ಮೇಲೆ ಎಲ್ಲಿಲ್ಲದ ಪ್ರೀತಿ, ಅಪರಿಮಿತ ಮಮತೆ. ಅದರಲ್ಲೂ ಅಮ್ಮ ಕೊಟ್ಟ ಸೀರೆಯೋ, ಒಡವೆಯೋ ಎಂದರೆ ಅಲ್ಲಿ ವಿಶೇಷ ಸೆಂಟಿಮೆಂಟ್ಸ್ ಇರುತ್ತದೆ. ಒಂದು ವೇಳೆ ಇಂತಹ ಸೀರೆಗಳು ಇದ್ದರೆ ಅದನ್ನು ನಮ್ಮ ಅಭಿರುಚಿಗೆ ತಕ್ಕಂತೆ ಸಲ್ವಾರ್, ಲಂಗ, ಕುರ್ತಿ,